# ಸಮುನ್ನತಿ ಫೈನಾನ್ಷಿಯಲ್ ಇಂಟರ್‌ಮೀಡಿಯೇಷನ್ ಅಂಡ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್

ಈ ಯೋಗ್ಯ ಪದ್ಧತಿ ಸಂಹಿತೆಯು ಆರ್‌ಬಿಐ ಮುಖ್ಯ ಸುತ್ತೋಲೆ–ಯೋಗ್ಯ ಪದ್ಧತಿಗಳ ಸಂಹಿತೆ(ಫೇರ್ ಪ್ರಾಕ್ಟಿಸಸ್ ಕೋಡ್) ಆರ್‌ಬಿಐ [ಮಾಸ್ಟರ್ ಸರ್ಕ್ಯೂಲರ್ ಡಿಎನ್‌ಬಿಆರ್(ಪಿಡಿ) ಸಿಸಿ ನಂ.054/03.10.119/2015–16 ದಿನಾಂಕ 1ನೇ ಜುಲೈ 2016] ಇದರ ಆಧಾರವಾಗಿರುತ್ತದೆ.

ಮುಂದುವರಿಕೆ ಆಧಾರದ ಮೇಲೆ ಆರ್‌ಬಿಐ ಸುತ್ತೋಲೆ ಸೂಚನೆಗಳನ್ನು ನೀಡಬಹುದಾದ ಕಾರಣ, ಈ ಮೇಲಿನ ಸುತ್ತೋಲೆಗೆ ನಂತರ ಯಾವುದೇ ತಿದ್ದುಪಡಿಯನ್ನು ಯೋಗ್ಯ ಪದ್ಧತಿ ಸಂಹಿತೆ ಅನುಸಾರ ಮೇಲ್ದರ್ಜೆಗೇರಿಸಲಾಗುವುದು.

## I. ಸಂಹಿತೆಯ ಉದ್ದೇಶ

ಈ ನೀತಿ ಸಂಹಿತೆಯು ಕೆಳಕಂಡ ಉದ್ದೇಶಗಳನ್ನು ಹೊಂದಿರುತ್ತದೆ :–

1. ಗ್ರಾಹಕರೊಂದಿಗೆ ವ್ಯವಹರಿಸುವಾಗ ಕನಿಷ್ಠ ಗುಣಮಟ್ಟ ಖಾತರಿಯನ್ನು ನಿಗದಿಗೊಳಿಸುವ ಮೂಲಕ ಯೋಗ್ಯ ಪದ್ಧತಿ ಪ್ರವರ್ತನೆ.
2. ಪಾರದರ್ಶಕತೆ ಹೆಚ್ಚಿಸುವ ಮೂಲಕ ಸಂಸ್ಥೆಯಿಂದ ಯಾವ ರೀತಿಗಳ ಸೇವಾ ಮಟ್ಟಗಳನ್ನು ನಿರೀಕ್ಷಿಸಬಹುದು ಎಂಬುದನ್ನು ಉತ್ತಮ ರೀತಿಯಲ್ಲಿ ಗ್ರಾಹಕರು ಅರ್ಥ ಮಾಡಿಕೊಳ್ಳಬಹುದಾದಂತೆ ಮಾಡುವುದು.
3. ಸಂಸ್ಥೆಯಲ್ಲಿ ಗ್ರಾಹಕರು ವಿಶ್ವಾಸ ಮತ್ತು ನಂಬಿಕೆಯನ್ನು ವೃದ್ಧಿಸುವುದು.

## II. ಸಂಹಿತೆಯ ಅನ್ವಯ

1. ಸಂಹಿತೆಯು ಸಂಸ್ಥೆಯಿಂದ ನೀಡಲಾಗುವ ಎಲ್ಲ ಉತ್ಪನ್ನಗಳಿಗೂ ಅನ್ವಯವಾಗುತ್ತದೆ.
2. ತನ್ನ ಗ್ರಾಹಕರ ಹಣಕಾಸು ಅಗತ್ಯತೆಗಳನ್ನು ಪೂರೈಸಲು ಸಂಸ್ಥೆಯು ಬಹು ಉತ್ಪನ್ನಗಳ ಮೌಲ್ಯಮಾಪನವನ್ನು ಮುಂದುವರಿಸಲಿದೆ.

3. ತನ್ನ ಗ್ರಾಹಕರಿಗೆ ಕಂಪನಿಯಿಂದ ಅಭಿವೃದ್ಧಿಗೊಳಿಸಲಾದ ಮತ್ತು ಒದಗಿಸಲಾದ ಯಾವುದೇ ಉತ್ಪನ್ನಕ್ಕೆ ಸಂಹಿತಯು ಅನ್ವಯವಾಗುವುದು ಮುಂದುವರಿಯುತ್ತದೆ.

## III. ಸಾಲಗಳು ಮತ್ತು ಅವುಗಳ ಪ್ರಕ್ರಿಯೆಗಳಿಗಾಗಿ ಅರ್ಜಿಗಳು

1. ಸಾಲ ಎತ್ತುವಳಿದಾರರಿಗೆ ನೀಡಲಾಗುವ ಎಲ್ಲ ಸಂವಹನ ಮಾಹಿತಿಯು ದೇಶೀಯ ಭಾಷೆಯದ್ದಾಗಿರುತ್ತದೆ ಅಥವಾ ಸಾಲ ಎತ್ತುವಳಿದಾರರಿಂದ ಅರ್ಥ ಮಾಡಿಕೊಳ್ಳಬಹುದಾದ ಒಂದು ಭಾಷೆಯಲ್ಲಿರುತ್ತದೆ.
2. ಸಾಲ ಅರ್ಜಿ ಫಾರಂಗಳು ಸಾಲ ಎತ್ತುವಳಿದಾರರ ಹಿತಾಸಕ್ತಿಗಳಿಗೆ ಪೂರಕವಾದ ಅಗತ್ಯ ಮಾಹಿತಿಯನ್ನು ಒಳಗೊಂಡಿರುತ್ತದೆ, ಇತರ ಎನ್‌ಬಿಎಫ್‌ಸಿಗಳಿಂದ ನೀಡಲಾಗುವ ನಿಯಮಗಳು ಮತ್ತು ಷರತ್ತುಗಳೊಂದಿಗೆ ಅರ್ಥಪೂರ್ಣ ಹೋಲಿಕೆ ಮಾಡಲು ಹಾಗೂ ಸಾಲ ಎತ್ತುವಳಿದಾರರಿಂದ ಮಾಹಿತಿ ಆಧರಿತ ನಿರ್ಧಾರ ಕೈಗೊಳ್ಳಲು ಇದರಿಂದ ಸಹಾಯವಾಗುತ್ತದೆ. ಅರ್ಜಿ ಪಾರಂನೊಂದಿಗೆ ಸಲ್ಲಿಸಬೇಕಾಗಿರುವ ಅಗತ್ಯ ದಾಖಲೆಪತ್ರಗಳ ವಿವರಗಳನ್ನು ಸಾಲ ಅರ್ಜಿ ಫಾರಂ ಒಳಗೊಂಡಿರುತ್ತದೆ.
3. ಎಲ್ಲ ಸಾಲ ಅರ್ಜಿಗಳ ಸ್ವೀಕೃತಿಗಾಗಿ ಸ್ವೀಕೃತಿ ಹಿಂಬರಹವನ್ನು ನೀಡುವ ವ್ಯವಸ್ಥೆಯನ್ನು ನಾವು ಹೊಂದಿದ್ದೇವೆ. ಸಾಲ ಅರ್ಜಿಯನ್ನು ವಿಲೇವಾರಿ ಮಾಡುವ ಸಮಯದ ಬಗ್ಗೆಯೂ ಸ್ವೀಕೃತಿ ಹಿಂಬರಹದಲ್ಲಿ ಸಹ ಸೂಚಿಸಲಾಗುತ್ತದೆ.

## IV. ಸಾಲ ಶ್ರೇಣಿ ಮತ್ತು ನಿಯಮ/ಷರತ್ತುಗಳು

1. ಸಾಲ ಮಂಜೂರಾತಿ ಪತ್ರದ ಮೂಲಕ ಸಾಲ ಎತ್ತುವಳಿದಾರರಿಂಥ ಅರ್ಥ ಮಾಡಿಕೊಳ್ಳಬಹುದಾದ ದೇಶೀಯ ಭಾಷೆಯಲ್ಲಿ ಸಾಲ ಎತ್ತುವಳಿದಾರರಿಗೆ ವಾರ್ಷಿಕ ಬಡ್ಡಿ ದರ ಮತ್ತು ಅದನ್ನು ಅನ್ವಯಿಸುವ ವಿಧಾನ ಸೇರಿದಂತೆ ನಿಯಮಗಳು

ಷರತ್ತುಗಳೊಂದಿಗೆ ಸಾಲ ಮಂಜೂರಾದ ಮೊತ್ತದ ವಿವರಗಳ ಬಗ್ಗೆ ಲಿಖಿತವಾಗಿ ನಾವು ಮಾಹಿತಿ ನೀಡುತ್ತೇವೆ ಹಾಗೂ ಸಾಲ ಎತ್ತುವಳಿದಾರರಿಂದ ಈ ನಿಯಮಗಳು ಮತ್ತು ಷರತ್ತುಗಳ ಸಮ್ಮತಿಯನ್ನು ನಮ್ಮ ದಾಖಲೆಯಲ್ಲಿ ಇರಿಸುತ್ತೇವೆ.

2. ವಿಳಂಬ ಪಾವತಿಗಾಗಿ ವಿಧಿಸಲಾಗುವ ದಂಡ ಬಡ್ಡಿ ಬಗ್ಗೆ ಸಾಲ ಒಪ್ಪಂದ ಕರಾರು ಪತ್ರದಲ್ಲಿ ನಾವು ದಪ್ಪ ಅಕ್ಷರಗಳಲ್ಲಿ ತಿಳಿಸುತ್ತೇವೆ.
3. ಸಾಲಗಳ ಮಂಜೂರಾತಿ/ವಿತರಣೆ ವೇಳೆ ಎಲ್ಲ ಗ್ರಾಹಕರಿಗೆ ಸಾಲ ಒಪ್ಪಂದ ಕರಾರಿನಲ್ಲಿ ತಿಳಿಸಲಾದ ಎಲ್ಲ ಅಡಕಗಳ ಪ್ರತಿ ದಾಖಲೆಪತ್ರಗಳ ಪ್ರತಿಯೊಂದಿಗೆ, ಸಾಲ ಎತ್ತುವಳಿದಾರರಿಂದ ಅರ್ಥ ಮಾಡಿಕೊಳ್ಳಬಹುದಾದಂತೆ ಸಾಲ ಒಪ್ಪಂದ ಕರಾರಿನ ಒಂದು ಪ್ರತಿಯನ್ನು ನಾವು ಒದಗಿಸುತ್ತೇವೆ.

## V. ನಿಯಮಗಳು ಮತ್ತು ಷರತ್ತುಗಳಲ್ಲಿ ಬದಲಾವಣೆ ಸೇರಿದಂತೆ ಸಾಲಗಳ ವಿತರಣೆ

1. ಸಾಲ ವಿತರಣೆ ದಿನಾಂಕ, ಬಡ್ಡಿ ದರಗಳು, ಸೇವಾ ಶುಲ್ಕಗಳು,. ಪಾವತಿಪೂರ್ವ ಶುಲ್ಕಗಳು ಇತ್ಯಾದಿ ಸೇರಿದಂತೆ ನಿಯಮಗಳು ಮತ್ತು ಷರತ್ತುಗಳಲ್ಲಿನ ಯಾವುದೇ ಬದಲಾವಣೆ ಕುರಿತು ದೇಶೀಯ ಭಾಷೆಯಲ್ಲಿ ಅಥವಾ ಸಾಲ ಎತ್ತುವಳಿದಾರ ಅರ್ಥ ಮಾಡಿಕೊಳ್ಳಬಹುದಾದ ಭಾಷೆಯಲ್ಲಿ ಸಾಲ ಎತ್ತುವಳಿದಾರರಿಗೆ ನಾವು ಮಾಹಿತಿ ನೀಡುತ್ತೇವೆ. ಬಡ್ಡಿ ದರಗಳು ಮತ್ತು ಇತರ ಶುಲ್ಕಗಳಲ್ಲಿನ ಬದಲಾವಣೆಗಳು ಭವಿಷ್ಯಾನ್ವಯದಲ್ಲಿ ಮಾತ್ರ ಜಾರಿಗೆ ಬರುತ್ತದೆ ಎಂಬುದನ್ನು ಸಹ ನಾವು ಖಾತರಿಪಡಿಸುತ್ತಿದ್ದೇವೆ. ಈ ಸಂಬಂಧ ಸೂಕ್ತ ಷರತ್ತನ್ನು ಸಾಲ ಒಪ್ಪಂದ ಕರಾರಿನಲ್ಲಿ ಸೇರಿಸಲಾಗುತ್ತದೆ.
2. ಈ ಕರಾರು ಒಪ್ಪಂದದ ಅಡಿ ಪಾವತಿಯನ್ನು ಹಿಂದಕ್ಕೆ ಪಡೆಯುವಿಕೆ/ತ್ವರಿತಗೊಳಿಸುವಿಕೆ ಅಥವಾ ನೆರವೇರಿಸುವಿಕೆ ನಿರ್ಧಾರವು ಸಾಲ ಒಪ್ಪಂದ ಕರಾರಿನೊಂದಿಗೆ ಸಾಂಗತ್ಯವಾಗಿರುತ್ತದೆ.

3. ಸಾಲ ಎತ್ತುವಳಿದಾರರ ವಿರುದ್ಧ ನಾವು ಹೊಂದಿರಬಹುದಾದ ಯಾವುದೇ ನ್ಯಾಯಸಮ್ಮತ ಹಕ್ಕು ಅಥವಾ ಯಾವುದೇ ಇತರ ಹಕ್ಕು ಪ್ರತಿಪಾದನೆಯ ಧಾರಣಾಧಿಕಾರಕ್ಕೆ ಒಳಪಟ್ಟು ಎಲ್ಲ ಬಾಕಿಗಳ ಮರುಪಾವತಿ ಅಥವಾ ಬಾಕಿ ಇರುವ ಮೊತ್ತದ ಚುಕ್ತಾದ ಮೇರೆಗೆ ನಾವು ಎಲ್ಲ ಸೆಕ್ಯೂರಿಟಿಗಳನ್ನು ಬಿಡುಗಡೆ ಮಾಡುತ್ತೇವೆ. ಕಾಯ್ದಿರಿಸಲಾದ ಇಂಥ ಹಕ್ಕುಗಳನ್ನು ಜಾರಿಗೊಳಿಸುವ ಸಂದರ್ಭವಿದ್ದರೆ, ಉಳಿದ ಕ್ಲೇಮುಗಳು ಹಾಗೂ ಕ್ಲೇಮು ಇತ್ಯರ್ಥವಾಗುವ/ಪಾವತಿಯಾಗುವ ತನಕ ಸೆಕ್ಯೂರಿಟಿಗಳನ್ನು ಉಳಿಸಿಕೊಳ್ಳಲು ಯಾವ ಷರತ್ತುಗಳ ಅನ್ವಯ ನಾವು ಹಕ್ಕುಳ್ಳವರಾಗಿದ್ದೇವೆ ಎಂಬ ಸಂಪೂರ್ಣ ವಿವರಗಳೊಂದಿಗೆ ಈ ಬಗ್ಗೆ ನಾವು ಸಾಲ ಎತ್ತುವಳಿದಾರರಿಗೆ ನೋಟಿಸ್ ನೀಡುತ್ತೇವೆ.

## VI. ಸಾಮಾನ್ಯ ವಿಷಯಗಳು

1. ಸಾಲ ಒಪ್ಪಂದ ಕರಾರಿನ ನಿಯಮಗಳು ಮತ್ತು ಷರತ್ತುಗಳಲ್ಲಿ ಒದಗಿಸಲಾಗಿರುವ ಉದ್ದೇಶಗಳನ್ನು ಹೊರತುಪಡಿಸಿ ಸಾಲ ಎತ್ತುವಳಿದಾರರ ಇತರ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡುವುದರಿಂದ ನಾವು ದೂರು ಇರುತ್ತೇವೆ (ಸಾಲ ಎತ್ತುವಳಿದಾರರಿಂದ ಈ ಹಿಂದೆ ಬಹಿರಂಗಗೊಳಿಸದೇ ಇರುವ ಮಾಹಿತಿ ಗಮನಕ್ಕೆ ಬರದ ಹೊರತು).
2. ಸಾಲ ಎತ್ತುವಳಿ ಖಾತೆಯ ವರ್ಗಾವಣೆಗಾಗಿ ಸಾಲ ಎತ್ತುವಳಿದಾರರಿಂದ ಮನವಿ ಸ್ವೀಕೃತಿ ಪ್ರಕರಣದಲ್ಲಿ, ನಮ್ಮ ಸಮ್ಮತಿ ಅಥವಾ ಆಕ್ಷೇಪಣೆ ಇದ್ದಲ್ಲಿ, ಮನವಿ ಸ್ವೀಕೃತಿ ದಿನಾಂಕದಿಂದ 21 ದಿನಗಳ ಒಳಗೆ ಅದನ್ನು ತಿಳಿಸಲಾಗುವುದು. ಅಂಥ ವರ್ಗಾವಣೆಯು ಕಾನೂನಿನ ಅನುಸಾರ ಪಾರದರ್ಶಕ ಕರಾರು ಒಪ್ಪಂದ ನಿಯಮಗಳಂತೆ ಇರುತ್ತದೆ.

3. ವೈಯಕ್ತಿಕ ಸಾಲಗಾರರಿಗೆ ಮಂಜೂರು ಮಾಡಲಾದ ಚಲಾವಣೆಯಲ್ಲಿರುವ ಎಲ್ಲ ದರ ಅವಧಿ ಸಾಲಗಳ ಮೇಲೆ ಸ್ವಭಾರೆ ಹಕ್ಕು ರದ್ದತಿ ಶುಲ್ಕಗಳು/ಪೂರ್ವ–ಪಾವತಿ ದಂಡಗಳನ್ನು ನಾವು ವಿಧಿಸುವುದಿಲ್ಲ.

## VII. ನಿರ್ದೇಶಕರ ಮಂಡಳಿಯ ಜವಾಬ್ದಾರಿ

ನಮ್ಮ ನಿರ್ದೇಶಕರ ಮಂಡಳಿಯು ಸಂಸ್ಥೆಯೊಳಗೆ ಸಮಂಜಸ ಕುಂದುಕೊರತೆ ಪರಿಹಾರ ವ್ಯವಸ್ಥೆಯನ್ನು ಸಹ ಹೊಂದಿರುತ್ತದೆ. ಈ ವ್ಯವಸ್ಥೆಯು ಸಂಸ್ಥೆಯ ಸಾಲ ನೀಡಿಕೆ ಕಾರ್ಯನಿರ್ವಹಣೆಯಲ್ಲಿನ ನಿರ್ಧಾರದಲ್ಲಿ ಉದ್ಭವಿಸಬಹುದಾದ ಎಲ್ಲ ವ್ಯಾಜ್ಯ–ವಿವಾದಗಳನ್ನು ಆಲಿಸಿ ವಿಚಾರಣೆಗೆ ಒಳಗೆ ಒಳಪಡಿಸುತ್ತದೆ ಹಾಗೂ ಮುಂದಿನ ಉನ್ನತ ಮಟ್ಟದಲ್ಲಿ ಅದನ್ನು ವಿಲೇವಾರಿ/ಇತ್ಯರ್ಥಪಡಿಸುತ್ತದೆ. ನಿರ್ದೇಶಕರ ಮಂಡಳಿಯು ಯೋಗ್ಯ ಪದ್ಧತಿಗಳ ಸಂಹಿತೆಯ ಪಾಲನೆಯ ಕಾಲಕಾಲದ ಪರಾಮರ್ಶೆ ಹಾಗೂ ಆಡಳಿತ ಮಂಡಳಿಯ ವಿವಿಧ ಮಟ್ಟಗಳಲ್ಲಿ ಕುಂದುಕೊರತೆ ಪರಿಹಾರ ವ್ಯವಸ್ಥೆಯ ಕಾರ್ಯನಿರ್ವಹಣೆ ಬಗ್ಗೆ ಕಾಲಕಾಲಕ್ಕೆ ಪರಾಮರ್ಶೆ ಸಹ ಒದಗಿಸುತ್ತದೆ. ಆಡಳಿತಮಂಡಳಿಯಿಂದ ಸೂಚಿಸಬಹುದಾದಂತೆ ನಿಯತ ಸಮಯಗಳಲ್ಲಿ ಮಂಡಳಿಗೆ ಇಂಥ ಪರಾಮರ್ಶೆಗಳ ಸಮಗ್ರ ವರದಿಯನ್ನು ಸಲ್ಲಿಸಲಾಗುತ್ತದೆ.

## VIII. ಕುಂದುಕೊರತೆ ಪರಿಹಾರ ಅಧಿಕಾರಿ

ಕಾರ್ಯಾಚರಣೆ ಮಟ್ಟದಲ್ಲಿ, ನಮ್ಮ ಗ್ರಾಹಕರ ಪ್ರಯೋಜನಕ್ಕಾಗಿ, ನಮ್ಮ ಎಲ್ಲ ಶಾಖೆಗಳಲ್ಲಿ/ವಾಣಿಜ್ಯ ವ್ಯವಹಾರಗಳ ನಡೆಯುವ ಸ್ಥಳಗಳಲ್ಲಿ ನಾವು ಈ ಕೆಳಕಂಡ ಮಾಹಿತಿಗಳನ್ನು ನಾವು ಮುಖ್ಯವಾಗಿ ಪ್ರದರ್ಶಿಸುತ್ತೇವೆ :–

1) ನಮ್ಮ ವಿರುದ್ಧ ದೂರುಗಳ ಇತ್ಯರ್ಥಕ್ಕಾಗಿ ಸಾರ್ವಜನಿಕರು ಸಂಪರ್ಕಿಸಬಹುದಾದ ಕುಂದುಕೊರತೆ ಪರಿಹಾರ ಅಧಿಕಾರಿಯ ಹೆಸರು ಮತ್ತು ಸಂಪರ್ಕ ವಿವರಗಳು (ದೂರವಾಣಿ/ಮೊಬೈಲ್ ಸಂಖ್ಯೆ ಹಾಗೂ ಇ–ಮೇಲ್ ವಿಳಾಸ).

2) ದೂರು/ವ್ಯಾಜ್ಯ–ವಿವಾದ ಒಂದು ತಿಂಗಳ ಒಳಗೆ ಇತ್ಯರ್ಥವಾಗದಿದ್ದಲ್ಲಿ, ನಮ್ಮ ನೋಂದಣಿ ಕಚೇರಿಯ ಅಧಿಕಾರ ವ್ಯಾಪ್ತಿಯು ಒಳಪಡುವ ಆರ್‌ಬಿಐನ ಡಿಎನ್‌ಬಿಎಸ್‌ನ ಪ್ರಾದೇಶಿಕ ಕಚೇರಿಯ ಉಸ್ತುವಾರಿ ಅಧಿಕಾರಿಗೆ (ಸಂಪೂರ್ಣ ಸಂಪರ್ಕ ವಿವರಗಳು) ಗ್ರಾಹಕರು ಮೊರೆ ಹೋಗಬಹುದು.

ಸಾರ್ವಜನಿಕ ನೋಟಿಸ್, ಕುಂದುಕೊರತೆ ಪರಿಹಾರ ಅಧಿಕಾರಿಯ ಹಾಗೂ ಆರ್‌ಬಿಐನ ಪ್ರಾದೇಶಿಕ ಕಚೇರಿಯ ವಿವರಗಳೊಂದಿಗೆ ಕಂಪನಿಯಿಂದ ಅನುಸರಿಸಲಾಗುವ ಕುಂದುಕೊರತೆ ಪರಿಹಾರ ವ್ಯವಸ್ಥೆ ಬಗ್ಗೆ ಸಾರ್ವಜನಿಕರಿಗೆ ತಿಳಿಸುವ ಉದ್ದೇಶವನ್ನು ಈಡೇರಿಸುತ್ತದೆ.

## IX. ಯೋಗ್ಯ ಪದ್ಧತಿ ಸಂಹಿತೆಯ ಭಾಷೆ ಮತ್ತು ಸಂವಹನ ವಿಧಾನ

ಯೋಗ್ಯ ಪದ್ಧತಿ ಸಂಹಿತೆಯು ದೇಶೀಯ ಭಾಷೆಯಲ್ಲಿ ಸಹ ಇರುತ್ತದೆ ಹಾಗೂ ಇದಕ್ಕೆ ಸಂಬಂಧಪಟ್ಟ ವಿವಿಧ ಮಂದಿಯ ಮಾಹಿತಿಗಾಗಿ ನಮ್ಮ ವೆಬ್‌ಸೈಟ್‌ನಲ್ಲಿಯೂ ಸಹ ಪ್ರಕಟಿಸಲಾಗುತ್ತದೆ.

## X. ಬಡ್ಡಿ ದರ

(1) ಹಣಕಾಸು ವೆಚ್ಚ, ಅಲ್ಪ ಲಾಭ ಹಾಗೂ ರಿಸ್ಕ್ ಪ್ರೀಮಿಯಂನಂಥ ಸೂಕ್ತ ಅಂಶಗಳನ್ನು ಗಣನೆಗೆ ತೆಗೆದುಕೊಂಡು ನಾವು ಬಡ್ಡಿ ದರ ಮಾದರಿಯನ್ನು ಅನುಸರಿಸುತ್ತೇವೆ ಹಾಗೂ ಸಾಲಗಳು ಮತ್ತು ಮುಂಗಡಗಳಿಗಾಗಿ ವಿಧಿಸಬೇಕಾದ ಬಡ್ಡಿ ದರಗಳ ಬಗ್ಗೆ ನಿರ್ಧರಿಸುತ್ತೇವೆ. ಬಡ್ಡಿ ದರ ಹಾಗೂ ಸಾಲ ಎತ್ತುವಳಿದಾರರ

ವಿಭಿನ್ನ ವರ್ಗಗಳಿಗೆ ವಿಭಿನ್ನ ಬಡ್ಡಿ ದರಗಳನ್ನು ವಿಧಿಸುವುದಕ್ಕಾಗಿ ಹೊಣೆಗಾರಿಕೆಯ ಶ್ರೇಣೀಕರಣಗಳು ಅಥವಾ ನ್ಯಾಯಸಮ್ಮತ ಆಧಾರದ ಬಗ್ಗೆ ಸಾಲ ಎತ್ತುವಳಿದಾರರು ಅಥವಾ ಗ್ರಾಹಕರಿಗೆ ಅರ್ಜಿ ಫಾರಂನಲ್ಲಿ ಬಹಿರಂಗಗೊಳಿಸಲಾಗುವುದು ಹಾಗೂ ಸಾಲ ಮಂಜೂರಾತಿ ಪತ್ರದಲ್ಲಿ ಮಾಹಿತಿ ನೀಡಲಾಗುವುದು.

(2) ಬಡ್ಡಿ ದರಗಳು ಹಾಗೂ ಹೊಣೆಗಾರಿಕೆಯ ಶ್ರೇಣೀಕರಣಗಳ ಕುರಿತು ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಲಭ್ಯವಿರುವಂತೆ ಸಹ ಮಾಡಲಾಗುವುದು ಅಥವಾ ಪ್ರಮುಖ ವಾರ್ತಾಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಬಡ್ಡಿ ದರಗಳಲ್ಲಿ ಬದಲಾವಣೆಯಾದಾಗಲೆಲ್ಲ ವೆಬ್‌ಸೈಟ್ ಅಥವಾ ವಾರ್ತಾಪತ್ರಿಕೆಗಳಲ್ಲಿ ಪ್ರಕಟಿಸುವ ಮಾಹಿತಿಯನ್ನು ಪರಿಷ್ಕರಿಸಲಾಗುವುದು.

(3) ಬಡ್ಡಿ ದರವು ವಾರ್ಷಿಕ ದರವಾಗಿರುತ್ತದೆ. ಹೀಗಾಗಿ ವಿಧಿಸಲಾಗುವ ನಿಖರ ಬಡ್ಡಿ ದರದ ಬಗ್ಗೆ ಗ್ರಾಹಕರಿಗೆ ತಿಳಿದಿರಬೇಕು.

(4) ಬಡ್ಡಿ ದರಗಳು ಮತ್ತು ಪರಿಷ್ಕರಣೆ ಪ್ರಕ್ರಿಯೆ ಹಾಗೂ ಇತರ ಶುಲ್ಕಗಳನ್ನು ನಿರ್ಧರಿಸುವಾಗ ನಾವು ಸೂಕ್ತ ಆಂತರಿಕ ತತ್ತ್ವಗಳು ಮತ್ತು ವಿಧಾನಗಳನ್ನು ನಿಗದಿಗೊಳಿಸಿ ಅದನ್ನು ಅನುಸರಿಸುತ್ತೇವೆ.

## XI. ನಮ್ಮಿಂದ ಹಣಕಾಸು ನೆರವು ನೀಡಲಾದ ವಾಹನಗಳ ಮರುಸ್ವಾಧೀನ

ಸಾಲ ಎತ್ತುವಳಿದಾರರೊಂದಿಗಿನ ಕರಾರು/ಸಾಲ ಒಪ್ಪಂದದಲ್ಲಿ ನಾವು ಮರು–ಸ್ವಾಧೀನ ನಿಯಮವು ಒಳಗೊಂಡಿದ್ದು, ಅದನ್ನು ಕಾನೂನು ಬದ್ಧವಾಗಿ ಜಾರಿಗೊಳಿಸಬಹುದಾಗಿರುತ್ತದೆ. ಪಾರದರ್ಶಕತೆಯನ್ನು ಖಾತರಿಗೊಳಿಸಲು ಕರಾರು/ಸಾಲ ಒಪ್ಪಂದದ ನಿಯಮಗಳು ಮತ್ತು ಷರತ್ತುಗಳು ಇವುಗಳಿಗೆ ಸಂಬಂಧಪಟ್ಟ ನಿಯಮಗಳನ್ನೂ ಸಹ ಒಳಗೊಂಡಿರುತ್ತದೆ: (1) ಸ್ವಾಧೀನಕ್ಕೆ ತೆಗೆದುಕೊಳ್ಳುವುದಕ್ಕೆ ಮುನ್ನ

ನೋಟಿಸ್ ಅವಧಿ ; (2) ನೋಟಿಸ್ ಅವಧಿಯನ್ನು ಮನ್ನಾ ಮಾಡಬಹುದಾದ ಸನ್ನಿವೇಶಗಳು ; (3) ಭದ್ರತೆಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ವಿಧಾನ ; (4) ಸ್ವತ್ತಿನ ಮಾರಾಟ/ಹರಾಜಿಗೆ ಮುನ್ನ ಸಾಲ ಮರು ಪಾವತಿಗಾಗಿ ಸಾಲ ಎತ್ತುವಳಿದಾರರಿಗೆ ಅಂತಿಮ ಅವಕಾಶ ನೀಡುವುದಕ್ಕೆ ಸಂಬಂಧಪಟ್ಟ ನಿಯಮ ; (5) ಸಾಲ ಎತ್ತುವಳಿದಾರರಿಗೆ ಮರು ಸ್ವಾಧೀನ ನೀಡುವುದಕ್ಕೆ ವಿಧಾನಗಳು ಹಾಗೂ (6) ಸ್ವತ್ತಿನ ಮಾರಾಟ/ಹರಾಜು ಮಾಡುವ ವಿಧಾನ. ಇಂಥ ನಿಯಮಗಳು ಮತ್ತು ಷರತ್ತುಗಳ ಪ್ರತಿಯನ್ನು ಸಾಲ ಎತ್ತುವಳಿದಾರರಿಗೆ ಲಭ್ಯವಾಗುವಂತೆ ಮಾಡಲಾಗುವುದು.

## XII. ಚಿನ್ನಾಭರಣ ಮೇಲಾಧಾರಕ್ಕೆ ಪ್ರತಿಯಾಗಿ ಸಾಲ ನೀಡಿಕೆ

ಚಿನ್ನಾಭರಣಕ್ಕೆ ಪ್ರತಿಯಾಗಿ ಸಾಲ ನೀಡುವಾಗ ನಾವು ಈ ಮೇಲಿನ ನಿಯಮಗಳೊಂದಿಗೆ ಈ ಕೆಳಕಂಡವುಗಳನ್ನು ಅಳವಡಿಸಿಕೊಳ್ಳುತ್ತೇವೆ. ಚಿನ್ನಾಭರಣ ಮೇಲಾಧಾರಕ್ಕೆ ಪ್ರತಿಯಾಗಿ ಸಾಲ ನೀಡುವುದಕ್ಕಾಗಿ ಮಂಡಳಿಯಿಂದ ಅಂಗೀಕರಿಸಲಾದ ನೀತಿಯನ್ನು ನಾವು ಹೊಂದಿದ್ದೇವೆ.

(1) ಯಾವುದೇ ಸಾಲವನ್ನು ನೀಡುವುದಕ್ಕೆ ಮುನ್ನ ಆರ್‌ಬಿಐನಿಂದ ನಿಗದಿಗೊಳಿಸಿರುವ ಕೆವೈಸಿ ಮಾರ್ಗಸೂಚಿಗಳನ್ನು ಪಾಲಿಸಲು ಸೂಕ್ತ ಕ್ರಮಗಳನ್ನು ಅನುಸರಿಸಲಾಗುವುದು ಹಾಗೂ ಗ್ರಾಹಕರು ಸೂಕ್ತ ಕಾರ್ಯತತ್ಪರತೆ ಅನುಸರಿಸುವುದನ್ನು ಖಾತರಿಗೊಳಿಸಿಕೊಳ್ಳಲಾಗುವುದು,

(2) ಸ್ವೀಕರಿಸಲಾದ ಚಿನ್ನಕ್ಕಾಗಿ ಸೂಕ್ತ ಲೋಹ ಪರೀಕ್ಷೆ,

(3) ಚಿನ್ನಾಭರಣ ಮಾಲೀಕತ್ವವನ್ನು ದೃಢಪಡಿಸಿಕೊಳ್ಳಲು ಆಂತರಿಕ ವ್ಯವಸ್ಥೆ,

(4) ಸುರಕ್ಷಿತ ಅಭಿರಕ್ಷೆಯಲ್ಲಿ ಚಿನ್ನಾಭರಣ ಸಂಗ್ರಹಕ್ಕಾಗಿ ಸೂಕ್ತ ವ್ಯವಸ್ಥೆ, ಆಗ್ಗಿಂದಾಗ್ಗೆ ಮುಂದುವರಿಕೆ ಆಧಾರದಲ್ಲಿ ವ್ಯವಸ್ಥೆಗಳ ಪರಾಮರ್ಶೆ, ಸಂಬಂಧಪಟ್ಟ ಸಿಬ್ಬಂದಿಗೆ

ತರಬೇತಿ ಹಾಗೂ ವಿಧಾನಗಳನ್ನು ಕಟ್ಟುನಿಟ್ಟಾಗಿ ಅನುಸರಿಸಲಾಗುತ್ತಿರುವ ಬಗ್ಗೆ ಆಂತರಿಕ ಲೆಕ್ಕಪರಿಶೋಧಕರಿಂದ ಖಚಿತಪಡಿಸಿಕೊಳ್ಳಲು ಆಗ್ಗಿಂದಾಗ್ಗೆ ಪರಿಶೀಲನೆ. ಚಿನ್ನಾಭರಣಗಳ ಸುರಕ್ಷಿತ ಸಂಗ್ರಹಕ್ಕಾಗಿ ಸೂಕ್ತ ಸೌಲಭ್ಯ ಹೊಂದಿರದೇ ಇರುವ ಶಾಖೆಗಳಿಂದ ಇಂಥ ಸಾಲಗಳನ್ನು ನೀಡುವುದಿಲ್ಲ.

(5) ಮೇಲಾಧಾರವಾಗಿ ಸ್ವೀಕರಿಸಲಾದ ಚಿನ್ನಾಭರಣಕ್ಕೆ ಸೂಕ್ತವಾಗಿ ವಿಮೆ ಮಾಡಿಸಿರಬೇಕು.

(6) ಸಾಲ ಎತ್ತುವಳಿದಾರರಿಗೆ ಸೂಕ್ತ ಪೂರ್ವ ನೋಟಿಸ್‌ನೊಂದಿಗೆ ಪಾವತಿ ರಹಿತ ಪ್ರಕರಣದಲ್ಲಿ ಪಾರದರ್ಶಕ ಹರಾಜು ಪ್ರಕ್ರಿಯೆ. ಹಿತಾಸಕ್ತಿ ಸಂಘರ್ಷ ಇರಬಾರದು ಹಾಗೂ ಸಮೂಹ ಸಂಸ್ಥೆಗಳು ಮತ್ತು ಸಂಬಂಧಪಟ್ಟ ಸಂಸ್ಥೆಗಳೂ ಸೇರಿದಂತೆ ಹರಾಜು ವೇಳೆ ಎಲ್ಲ ವ್ಯವಹಾರಗಳಲ್ಲಿ ನ್ಯಾಯಸಮ್ಮತ ಸಂಬಂಧ ಇರುವುದನ್ನು ಹರಾಜು ಪ್ರಕ್ರಿಯೆ ವೇಳೆ ಖಚಿತಪಡಿಸಿಕೊಳ್ಳಬೇಕು.

(7) ಕನಿಷ್ಠ ಎರಡು ವಾರ್ತಾ ಪತ್ರಿಕೆಗಳಲ್ಲಿ, ಒಂದು ಸ್ಥಳೀಯ ಭಾಷೆ ಹಾಗೂ ಮತ್ತೊಂದು ರಾಷ್ಟ್ರೀಯ ದಿನಪತ್ರಿಕೆಯಲ್ಲಿ ಜಾಹೀರಾತುಗಳನ್ನು ನೀಡುವ ಮೂಲಕ ಸಾರ್ವಜನಿಕವಾಗಿ ಹರಾಜನ್ನು ಪ್ರಕಟಿಸಬೇಕು.

(8) ನೀತಿಯಂತೆ, ನಾವು ತಾವಾಗಿಯೇ ಹರಾಜುಗಳಲ್ಲಿ ಭಾಗವಹಿಸುವುದಿಲ್ಲ.

(9) ಅಡಮಾನ ಮಾಡಲಾದ ಚಿನ್ನವನ್ನು ಮಂಡಳಿಯಿಂದ ಅಂಗೀಕರಿಸಲಾದ ಹರಾಜುದಾರರ ಮೂಲಕ ಹರಾಜು ಮಾಡಲಾಗುವುದು.

(10) ಕ್ರೋಢೀಕರಣ, ಅನುಷ್ಠಾನ ಮತ್ತು ಅನುಮೋದನೆ ಕರ್ತವ್ಯಗಳ ಪ್ರತ್ಯೇಕತೆ ಸೇರಿದಂತೆ ವಂಚನೆ ಪ್ರಕರಣಗಳನ್ನು ವ್ಯವಹರಿಸುವುದಕ್ಕಾಗಿ ಜಾರಿಯಲ್ಲಿರುವ ವ್ಯವಸ್ಥೆಗಳು ಮತ್ತು ವಿಧಾನಗಳನ್ನು ಸಹ ಈ ನೀತಿಯು ಒಳಗೊಂಡಿರುತ್ತದೆ.

(11) ಸಾಲ ಒಪ್ಪಂದ ಕರಾರು ಹರಾಜು ವಿಧಾನಕ್ಕೆ ಸಂಬಂಧಪಟ್ಟ ವಿವರಗಳನ್ನು ಸಹ ಬಹಿರಂಗಗೊಳಿಸುತ್ತದೆ.

## XIII. ಪರಾಮರ್ಶೆ

ಯೋಗ್ಯ ಪದ್ಧತಿಗಳ ಸಂಹಿತೆಯ ಪಾಲನೆ ಹಾಗೂ ಕುಂದುಕೊರತೆ ಪರಿಹಾರ ವ್ಯವಸ್ಥೆಯ ಕಾರ್ಯನಿರ್ವಹಣೆಯನ್ನು ಆಡಳಿತ ಮಂಡಳಿ ನಿಯತವಾಗಿ ಪರಾಮರ್ಶಿಸುತ್ತದೆ ಹಾಗೂ ಇಂಥ ಪರಾಮರ್ಶೆಗಳ ಸಮಗ್ರ ವರದಿಯನ್ನು ನಿಯತವಾಗಿ ಆಡಳಿತ ಮಂಡಳಿಗೆ ಸಲ್ಲಿಸಲಾಗುತ್ತದೆ. ಈ ಸಂಹಿತೆಯ ಪರಿಷ್ಕೃತ ಪ್ರತಿಯನ್ನು ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಹಾಕಲಾಗುತ್ತದೆ.